ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-560003.**

ಸಂಖ್ಯೆ.ಡಿ4/ಎಸ್.ಎಸ್.ಎಲ್.ಸಿ-ಅಂ.ಪ ವಿತರಣೆ-01/2019-20 ದಿನಾಂಕ: 13-08-2019.

## ಸುತ್ತೋಲೆ

ವಿಷಯ:- ಎಸ್.ಎಸ್.ಎಲ್.ಸಿ ಪರೀಕ್ಷೆಯ ದ್ವಿತೀಯ / ತೃತೀಯ ಮತ್ತು ನಾಲ್ಕನೇ ಪ್ರತಿ ಮತ್ತು ಅನುತ್ತೀರ್ಣ ಅಂಕಪಟ್ಟಿ ಹಾಗೂ ತಿದ್ದುಪಡಿ ಅಂಕಪಟ್ಟಿಗಳು ಇತ್ಯಾದಿ ಪಡೆಯುವ ಬಗ್ಗೆ ಅಭ್ಯರ್ಥಿಯು ಅರ್ಜಿ ಸಲ್ಲಿಸಿದಾಗ ಶಾಲಾ ಮುಖ್ಯಶಿಕ್ಷಕರು ಅನುಸರಿಸಬೇಕಾದ ಕ್ರಮಗಳ ಕುರಿತು ಮಾರ್ಗದರ್ಶನ ಸೂಚನೆಗಳು.

ಉಲ್ಲೇಖ: 1. ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 100 ಡಿಟಿಬಿ 2014 ದಿನಾಂಕ: 26-10-2015.
2. ಈ ಕಛೇರಿ ಪತ್ರ ಸಂಖ್ಯೆ ಡಿ 3/ಅಂಕಪಟ್ಟಿ.ತಿದ್ದುಪಡಿ/01/2015-16 ದಿನಾಂಕ: 02-08-2016
3. ಸರ್ಕಾರದ ಆದೇಶ ಸಂಖ್ಯೆ ಇಡಿ 235 ಎಸ್.ಎಲ್‌ಬಿ 2018 ಬೆಂಗಳೂರು ದಿನಾಂಕ: 21-01-2019.

*******

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆ ಪಾಸಾದ ವಿದ್ಯಾರ್ಥಿಗಳಿಗೆ ಆಯಾ ವರ್ಷವೇ ಸಂಬಂಧಿಸಿದ ಶಾಲೆಗಳಿಗೆ ಎಸ್.ಎಸ್.ಎಲ್.ಸಿ ಮೂಲ ಅಂಕಪಟ್ಟಿಯನ್ನು ರವಾನಿಸಲಾಗುತ್ತದೆ. ತದನಂತರದಲ್ಲಿ ಅಭ್ಯರ್ಥಿಗಳಿಗೆ ವಿತರಿಸಲಾದ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಮೂಲ ಅಂಕಪಟ್ಟಿಯನ್ನು ಕಾರಣಾಂತರಗಳಿಂದ ಕಳೆದು ಹೋದ ಸಂದರ್ಭದಲ್ಲಿ ಅಂತಹ ಅಭ್ಯರ್ಥಿಯು ದ್ವಿತೀಯ, ತೃತೀಯ ಮತ್ತು ನಾಲ್ಕನೇ ಅಂಕಪಟ್ಟಿಯನ್ನು ನಿಗಧಿತ ಅರ್ಜಿಯೊಂದಿಗೆ ನಿಗಧಿತ ಶುಲ್ಕವನ್ನು ಪಾವತಿಸಿದ್ದಲ್ಲಿ, ಶಾಲಾ ಮುಖಾಂತರ ಪಡೆಯುವ ಅವಕಾಶ ಕಲ್ಪಿಸಲಾಗಿರುತ್ತದೆ. ಅಂತೆಯೇ ಅನುತ್ತೀರ್ಣ ಅಂಕಪಟ್ಟಿ, ತಿದ್ದುಪಡಿ ಅಂಕಪಟ್ಟಿ, ಹಾಗೂ ಮಂಡಳಿಯಿಂದ ಪಡೆಯುವಂತಹ ಇನ್ನಿತರೆ ಅಗತ್ಯ ಪ್ರಮಾಣ ಪತ್ರಗಳನ್ನು ಪಡೆಯಲು ಅಭ್ಯರ್ಥಿಗಳು ಶಾಲಾ ಮುಖಾಂತರ ಮಂಡಳಿಗೆ ಸಲ್ಲಿಸುವ ಪ್ರಕ್ರಿಯೆ ಇರುತ್ತದೆ.

ಉಲ್ಲೇಖ-1 ಮತ್ತು 2 ರಲ್ಲಿ ಈಗಾಗಲೇ ಸೂಚನೆಗಳನ್ನು ನೀಡಲಾಗಿದೆ. ಆದಾಗ್ಯೂ ಇತ್ತೀಚಿನ ದಿನಗಳಲ್ಲಿ ಇಂತಹ ಅರ್ಜಿಗಳನ್ನು ಪರಿಶೀಲಿಸಲಾಗಿ, ನಿಗಧಿತ ನಮೂನೆಯಲ್ಲಿ ಅಭ್ಯರ್ಥಿಗಳ ಮಾಹಿತಿಗಳನ್ನು ಶಾಲಾ ದಾಖಲೆಗಳನ್ನು ಪರಿಶೀಲಿಸದೇ ಸಂಬಂದಿಸಿದ ಶಾಲಾ ಮುಖ್ಯಶಿಕ್ಷಕರು ಸಹಿ ಮಾಡಿ ಅಪೂರ್ಣವಾಗಿ ಸಲ್ಲಿಸುತ್ತಿರುವುದು ಮಂಡಳಿಯು ಗಂಭೀರವಾಗಿ ಪರಿಗಣಿಸಿದೆ. ಮುಂದುವರೆದು, ಮಂಡಳಿಯಿಂದ ರವಾನಿಸಲಾದ ಅಂಕಪಟ್ಟಿಯನ್ನು ಶಾಲಾ ಮುಖ್ಯಶಿಕ್ಷಕರು ಪರಿಶೀಲಿಸದೇ ಬೇಜವಾಬ್ದಾರಿತನದಿಂದ ಅಭ್ಯರ್ಥಿಗಳಿಗೆ ವಿತರಿಸುತ್ತಿರುವುದು ಗಮನಕ್ಕೆ ಬಂದಿರುತ್ತದೆ.

ಹೀಗಾಗಿ ಇನ್ನು ಮುಂದೆ ಆಡಳಿತಾತ್ಮಕ ಹಿತದೃಷ್ಟಿಯಿಂದ ಶಾಲಾ ಮುಖ್ಯಶಿಕ್ಷಕರುಗಳು ಕೆಳಕಂಡಂತೆ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

- ಯಾವುದೇ ಅಭ್ಯರ್ಥಿಯು ದ್ವಿತೀಯ / ತೃತೀಯ ಮತ್ತು ನಾಲ್ಕನೇ ಅಂಕಪಟ್ಟಿಗಳಿಗಾಗಿ ಅರ್ಜಿಯನ್ನು ಶಾಲಾ ಮುಖಾಂತರ ಸಲ್ಲಿಸುವಾಗ ನಿಗಧಿತ ನಮೂನೆಯಲ್ಲಿ ಅಭ್ಯರ್ಥಿಯ ಮಾಹಿತಿಯನ್ನು ಸರಿಯಾಗಿ ಭರ್ತಿ ಮಾಡಲಾಗಿದೆಯೇ? ಸದರಿ ಶಾಲೆಯಲ್ಲಿಯೇ ವ್ಯಾಸಂಗ ಮಾಡಿರುವ ಅಭ್ಯರ್ಥಿಯೇ ಎಂಬುದನ್ನು ಶಾಲಾ ದಾಖಲೆಗಳನ್ನು ಹಾಗೂ ಫಲಿತಾಂಶ ಪಟ್ಟಿಯನ್ನು ಪರಿಶೀಲಿಸಿ, ಶಾಲಾ ಸಂಕೇತ / ಉತ್ತೀರ್ಣಗೊಂಡ ವರ್ಷ / ನೋಂದಣಿ ಸಂಖ್ಯೆ ಇತ್ಯಾದಿ ಮಾಹಿತಿಯನ್ನು ಖಚಿತಪಡಿಸಿಕೊಂಡ ನಂತರ ಮುಖ್ಯಶಿಕ್ಷಕರು ದೃಢೀಕರಿಸತಕ್ಕದ್ದು.

- ನಿಗಧಿತ ನಮೂನೆಯಲ್ಲಿ ಶಾಲೆಯ ವಿಳಾಸದೊಂದಿಗೆ ಅಭ್ಯರ್ಥಿ ಮೊಬೈಲ್‌ಸಂಖ್ಯೆ ಹಾಗೂ ಮುಖ್ಯಶಿಕ್ಷಕರ ಮೊಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.
- ಮಂಡಳಿಯಿಂದ ಇಂತಹ ಅಂಕಪಟ್ಟಿಗಳನ್ನು ಸಂಬಂಧಿಸಿದ ಶಾಲೆಗೆ ಅಂಚೆ ಮೂಲಕ ರವಾನಿಸಲಾದ ಸಂದರ್ಭದಲ್ಲಿ ಶಾಲೆಯು ಅಭ್ಯರ್ಥಿಗೆ ಅಂಕಪಟ್ಟಿಯನ್ನು ವಿತರಿಸುವಾಗ ವಿತರಣಾ ವಹಿಯಲ್ಲಿ ಸದರಿ ಅಭ್ಯರ್ಥಿಯ ಹೆಸರು ನೋಂದಣಿ ಸಂಖ್ಯೆ, ದಿನಾಂಕವನ್ನು ಹಾಗೂ ಅಭ್ಯರ್ಥಿಯ ಮೊಬೈಲ್ ಸಂಖ್ಯೆ ಸ್ಪಷ್ಟವಾಗಿ ನಮೂದಿಸತಕ್ಕದ್ದು.
- ಶಾಲಾ ಮುಖ್ಯಶಿಕ್ಷಕರು ಅಂಕಪಟ್ಟಿಯನ್ನು ವಿತರಿಸುವಾಗ ಅದೇ ಅಭ್ಯರ್ಥಿಯೇ ಎಂಬುದನ್ನು ಖಚಿತಪಡಿಸಿಕೊಂಡು ಅಭ್ಯರ್ಥಿಯ ಆಧಾರ್ ಕಾರ್ಡ್‌ನ ಪ್ರತಿ ಅಥವಾ ಅಧಿಕೃತ ದಾಖಲೆಗಳನ್ನು (Photo IDಹೊಂದಿರುವ ಅಧಿಕೃತ ದಾಖಲೆ) ಕಡ್ಡಾಯವಾಗಿ ಪಡೆಯತಕ್ಕದ್ದು. ಅಂತಹ ದಾಖಲೆಗಳ ಪ್ರತಿಯಲ್ಲಿ ಅಭ್ಯರ್ಥಿಯಿಂದ Self Attestation ಮಾಡಿಸುವುದು ಕಡ್ಡಾಯ ಹಾಗೂ ಅಭ್ಯರ್ಥಿಯ ಸಹಿಯು ಅರ್ಜಿ ನಮೂನೆಯಲ್ಲಿನ ಸಹಿಗೆ ತಾಳೆ ಹೊಂದುತ್ತದೆಯೇ ಎಂದು ಪರಿಶೀಲಿಸುವುದು.
- ಶಾಲಾ ಮುಖ್ಯಶಿಕ್ಷಕರು ಯಾವುದೇ ಕಾರಣಕ್ಕೂ ವಿದ್ಯಾರ್ಥಿಗಲ್ಲದೆ ಬೇರೆ ಯಾರಿಗೂ ಅಂಕಪಟ್ಟಿಯನ್ನು ವಿತರಿಸುವಂತಿಲ್ಲ.
- ಮಂಡಳಿಯಿಂದ ಸ್ವೀಕರಿಸಲ್ಪಟ್ಟ ಅಂಕಪಟ್ಟಿಗಳಲ್ಲಿ ಶಾಲಾ ವಿಳಾಸದ ಮೊಹರನ್ನು ಮಾತ್ರ ಅಳವಡಿಸತಕ್ಕದ್ದು. ಯಾವುದೇ ಕಾರಣಕ್ಕೂ ಮುಖ್ಯಶಿಕ್ಷಕರು ಸಹಿ ಮಾಡುವಂತಿಲ್ಲ.
- ಉಲ್ಲೇಖ-3 ರ ಸರ್ಕಾರದ ಆದೇಶ ದಿನಾಂಕ: 21-01-2019 ರನ್ವಯ ಅಂಕಪಟ್ಟಿಗೆ ಸಂಬಂಧಿಸಿದಂತೆ ಪರಿಷ್ಕರಿಸಲಾದ ಶುಲ್ಕದ ವಿವರಗಳನ್ನು ಎಲ್ಲಾ ಪ್ರೌಢ ಶಾಲೆಗಳಲ್ಲಿ ಸೂಚನಾ ಫಲಕಗಳಲ್ಲಿ ಕಡ್ಡಾಯವಾಗಿ ಪ್ರಕಟಿಸುವುದು.
- ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ ಅಭ್ಯರ್ಥಿ ಹೆಸರು / ತಂದೆ / ತಾಯಿ ಹೆಸರು ಮತ್ತು ಜನ್ಮದಿನಾಂಕ ಇತ್ಯಾದಿ ತಪ್ಪುಗಳಾಗಿದ್ದಲ್ಲಿ ತಿದ್ದುಪಡಿಗಾಗಿ ಅರ್ಜಿ ಸಲ್ಲಿಸಿದಲ್ಲಿ, ಅಂತಹ ಅರ್ಜಿಗಳನ್ನು ಸಹ ಕೂಲಂಕುಷವಾಗಿ ಪರಿಶೀಲಿಸಿ, ವಿದ್ಯಾರ್ಥಿಯು ವ್ಯಾಸಂಗ ಮಾಡಿದ ಪ್ರಾಥಮಿಕ ಶಾಲಾ ದಾಖಲಾತಿ ವಹಿಯನ್ನು ಪರಿಶೀಲಿಸಿ, ಪ್ರಾಥಮಿಕ ಶಾಲಾ ದಾಖಲಾತಿಯಲ್ಲಿರುವಂತೆ ಪ್ರೌಢ ಶಾಲೆಯ ದಾಖಲಾತಿ ವಹಿಗಳಲ್ಲಿ ಮಾಹಿತಿಗಳನ್ನು ನಮೂದಿಸಲಾಗಿದೆಯೇ ಎಂಬ ಬಗ್ಗೆ ಖಚಿತಪಡಿಸಿಕೊಂಡು ತಿದ್ದುಪಡಿಗೆ ಅನುಸರಿಸಬೇಕಾದ ವಿಧಾನಗಳಂತೆ ಪೂರ್ಣ ಪ್ರಸ್ತಾವನೆಯನ್ನು ಮಂಡಳಿಗೆ ಕಳುಹಿಸತಕ್ಕದ್ದು.
- ಅಂಕಪಟ್ಟಿಗಳ ಬಗ್ಗೆ ಮಾಹಿತಿಯನ್ನು ಕೋರಿ ಬಂದಂತಹ ಅಭ್ಯರ್ಥಿಗಳಿಗೆ ಸೂಕ್ತವಾದ ಸಲಹೆಗಳನ್ನು ಮಾರ್ಗದರ್ಶನವನ್ನು ನಿಮ್ಮ ಹಂತದಲ್ಲೇ ನೀಡತಕ್ಕದ್ದು. ವಿನಾ ಕಾರಣ ಅಭ್ಯರ್ಥಿಗಳನ್ನು ಮಂಡಳಿಗೆ ಕಳುಹಿಸತಕ್ಕದ್ದಲ್ಲ.

ಈ ಮೇಲ್ಕಂಡ ಸೂಚನೆಗಳನ್ನು ಎಲ್ಲಾ ಪ್ರೌಢ ಶಾಲಾ ಮುಖ್ಯಶಿಕ್ಷಕರು ಕಡ್ಡಾಯವಾಗಿ ಪಾಲಿಸತಕ್ಕದ್ದು ಒಂದು ವೇಳೆ ಶಾಲಾ ಮುಖ್ಯಶಿಕ್ಷಕರು ಮಾರ್ಗಸೂಚನೆಯನ್ನು ಉಲ್ಲಂಘಿಸಿದರೆ ಅಂತಹ ಶಾಲಾ ಮುಖ್ಯಶಿಕ್ಷಕರು/ ಶಿಕ್ಷಕರುಗಳೇ ಮುಂದಿನ ಆಗುಹೋಗುಗಳಿಗೆ ಜವಾಬ್ದಾರರಾಗುತ್ತಾರೆ.

(ಕರಡು ಮಾನ್ಯ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ)

ಕಾರ್ಯದರ್ಶಿಗಳು
ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,
ಬೆಂಗಳೂರು-03.

ಇವರಿಗೆ,

1. ಬೆಂಗಳೂರು ವಿಭಾಗ ವ್ಯಾಪ್ತಿಗೆ ಒಳಪಡುವ ಎಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ, ಉಪನಿರ್ದೇಶಕರುಗಳಿಗೆ ಮುಂದಿನ ಕ್ರಮಕ್ಕಾಗಿ.
2. ಬೆಂಗಳೂರು ವಿಭಾಗಕ್ಕೆ ಒಳಪಟ್ಟ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಉಪನಿರ್ದೇಶಕರ ಮುಖಾಂತರ)
3. ಬೆಂಗಳೂರು ವಿಭಾಗದ ಎಲ್ಲಾ ಪ್ರೌಢ ಶಾಲಾ ಮುಖ್ಯಶಿಕ್ಷಕರುಗಳಿಗೆ (ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ)
4. ಕಛೇರಿ ಪ್ರತಿ.